### ಕೃಷಿ ಜಯಂತಿ ಸಮಾರೋಪ: ಸ್ವರ್ಣವಲ್ಲಿ ಗಂಗಾಧರೇಂದ್ರ ಶ್ರೀ ಅಭಿಮತ

# ಸಾವಯವದಿಂದ ರೋಗ ನಿರೋಧಕ ಶಕ್ತಿ ವೃದ್ಧಿ

ಪ್ರಜಾವಾಣಿ ವಾರ್ತೆ



ಉತ್ತಮ ಕೃಷಿ ಕುಟುಂಬ ಪ್ರಶಸ್ತಿಯನ್ನು ಸಿದ್ದಾಪುರದ ಹೇರೂರು ಹೂಡ್ಲಮನೆಯ ಮಂಜುನಾಥ ದೇವರು ಹೆಗಡೆ ಅವರಿಗೆ ಪ್ರದಾನ ಮಾಡಲಾಯಿತು

**ಶಿರಸಿ:** ಸಾವಯವ ಕೃಷಿಯಿಂದ ಸಮಾಜದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ಮನೆಮನೆಯಲ್ಲಿ ಕನಿಷ್ಠ ಒಂದು ಗೋವನ್ನು ಸಾಕಬೇಕು ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಸೂಚಿಸಿದರು.

ಅವರು ಗುರುವಾರ ತಾಲ್ಲೂಕಿನ ಸ್ವರ್ಣವಲ್ಲೀಯಲ್ಲಿ ಕೃಷಿ ಪ್ರತಿಷ್ಠಾನ ಹಮ್ಮಿಕೊಂಡ ಕೃಷಿ ಜಯಂತಿ ಸಮಾರೋಪ ಸಮಾರಂಭದಲ್ಲಿ ಸಾನ್ನಿಧ್ಯ ನೀಡಿ ಆಶೀರ್ವಚನ ನುಡಿದರು.

ಹಸಿರಿನ ಜಿಲ್ಲೆಯಲ್ಲಿ ಹಾಲಿನ ಉತ್ಪಾದನೆ ಹೆಚ್ಚಬೇಕು. ಮನೆಗೊಂದಾದರೂ ಗೋವನ್ನು ಸಾಕಬೇಕು. ಗೋವಿನ ಹಾಲಿನಲ್ಲಿ ಅತಿಹೆಚ್ಚು ಪೌಷ್ಠಿಕಾಂಶ ಇರುತ್ತವೆ. ಸಾವಯವ ಕೃಷಿಗೆ ಕೂಡ ಉತ್ತೇಜಿಸುವಂತೆ ಆಗುತ್ತದೆ ಎಂದರು.

ದೇವರ ವಿಚಾರದಲ್ಲಿ ಪ್ರಹ್ಲಾದನಂತೆ ಅಚಲ ನಂಬಿಕೆ ಇಡಬೇಕು. ದೇವರ ಬಗ್ಗೆ ಮನಸ್ಸಿನ ಗೊಂದಲ ದಾಟಬೇಕು. ದೇವರ ನಾಮ ಸ್ಮರಣೆ ಬಲ ಕೊಡುತ್ತದೆ ಎಂದರು.

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯದ ಕುಲಪತಿ ಆರ್‌.ಸಿ.ಆರ್‌.ಜಗದೀಶ ಮಾತನಾಡಿ, ರಾಜ್ಯ ಸುಭಿಕ್ಷವಾಗಿದೆ ಎಂದರೆ ಮಠ ಮಾನ್ಯಗಳು ಕಾರಣವಾಗಿದೆ. ವಿದ್ಯಾವಂತರಾದಂತೆ ಕುಟುಂಬಗಳು ಒಡೆಯುತ್ತವೆ ಆದರೆ, ಮಲೆನಾಡಿನಲ್ಲಿ ಅವಿಭಕ್ತ ಕುಟುಂಬ ಇದೆ. ಇದನ್ನು ಉಳಿಸಬೇಕು ಎಂದರು.

ವೇದಿಕೆಯಲ್ಲಿ ಮಠದ ಆಡಳಿತ ಮಂಡಳಿ ಅಧ್ಯಕ್ಷ ವಿ.ಎನ್‌.ಹೆಗಡೆ ಬೊಮ್ಮನಳ್ಳಿ, ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಆರ್‌.ಎನ್‌.ಹೆಗಡೆ ಉಳ್ಳಿಕೊಪ್ಪ, ಕೃಷಿ ತಜ್ಞ ಡಾ. ಲಕ್ಷ್ಮೀನಾರಾಯಣ ಹೆಗಡೆ ಇತರರು ಇದ್ದರು. ಎಂ.ಕೆ.ಗೋಳಿಕೊಪ್ಪ ದಂಪತಿ ಫಲ ಸಮರ್ಪಿಸಿದರು. ಸುರೇಶ ಹಕ್ಕಿಮನೆ ನಿರ್ವಹಿಸಿದರು.

## ಕೂಡು ಕುಟುಂಬ ಪ್ರಶಸ್ತಿ ಪ್ರದಾನ

ಸಾಧಕ ಕೃಷಿಕ ಕೃಷಿ ಕಂಠೀರವ ಪ್ರಶಸ್ತಿಗೆ ವಾನಳ್ಳಿ ಕಣ್ಣೆಮನೆಯ ಗಣಪತಿ ಕೃಷ್ಣ ಭಟ್ಟ, ಸಾಧಕ ಕೃಷಿ ಮಹಿಳೆ ಪ್ರಶಸ್ತಿಗೆ ಜೋಯಿಡಾ ಶಿರೋಳದ ಪಾರ್ವತಿ ಮಹಾದೇವ ಗಾವಡಾ, ಉತ್ತಮ ಕೃಷಿ ಕುಟುಂಬ ಪ್ರಶಸ್ತಿಗೆ ಸಿದ್ದಾಪುರದ ಹೇರೂರು ಹೂಡ್ಲಮನೆಯ ಮಂಜುನಾಥ ದೇವರು ಹೆಗಡೆ ಅವರಿಗೆ ಪ್ರದಾನ ಮಾಡಲಾಯಿತು. ಉತ್ತಮ ಕುಶಲಕರ್ಮಿ ಪ್ರಶಸ್ತಿಯನ್ನು ಅಂಕೋಲಾದ ಹಿಲ್ಲೂರಿನ ಗೋವಿಂದ ಗಣಪಯ್ಯ ಹೆಗಡೆ ಕರೀಕಲ್‌, ಉತ್ತಮ ಬೆಟ್ಟ ನಿರ್ವಹಣಾ ಪ್ರಶಸ್ತಿಗೆ ಪ್ರಥಮ ಸ್ಥಾನ ವಾಜಗದ್ದೆ ಶೀಗೆಹಳ್ಳಿಯ ದತ್ತಾತ್ರೇಯ ಗಣಪತಿ ಹೆಗಡೆ ಸಹೋದರರು, ದ್ವಿತೀಯ ಸ್ಥಾನ ಸಿದ್ದಾಪುರದ ನಂದ್ಯಾನೆಯ ಮಹಾಬಲೇಶ್ವರ ವೆಂಕಟರಮಣ ಹೆಗಡೆ, ಯಲ್ಲಾಪುರದ ಕೆಂಚನಳ್ಳಿ ಕೆರೆಹೊಸಳ್ಳಿಯ ನಾರಾಯಣ ಗಣಪತಿ ಭಟ್ ಅವರಿಗೆ ಪ್ರದಾನ ಮಾಡಲಾಯಿತು.

## ಕೃಷಿ ಜಯಂತಿ: ಐದು ನಿರ್ಣಯಗಳು

ಸ್ವರ್ಣವಲ್ಲೀ ಕೃಷಿ ಜಯಂತಿಯ ಸಮಾರೋಪದಲ್ಲಿಐದು ನಿರ್ಣಯ ಅಂಗೀಕರಿಸಲಾಯಿತು. ಅಡಿಕೆಗೆ ತಗುಲಿದ ಎಲೆ ಚುಕ್ಕೆ ರೋಗ ಹರಡುವುದನ್ನು ತಡೆಯಲು ರೈತರು ಮುಂದಾಗಬೇಕು. ಇದಕ್ಕೆ ಸರ್ಕಾರ ನೆರವು ನೀಡಬೇಕು. ಸಾಂಪ್ರದಾಯಿಕ ಬೆಳೆ ಪ್ರದೇಶದಲ್ಲಿ ಅಡಿಕೆ ಉತ್ತೇಜಿಸಿ, ಈ ಪ್ರದೇಶ ವಿಸ್ತರಣೆ ಸಮಗ್ರ ಅಧ್ಯಯನ ಮಾಡಬೇಕು. ಹಾಲಿನ ದರ ಪ್ರತಿ ಲೀಟರ್‌ಗೆ ಕನಿಷ್ಠ ₹40 ಏರಿಸಬೇಕು. ಮನೆಯಲ್ಲಿ ಒಂದಾದರೂ ಗೋವು ಸಾಕಬೇಕು. ಮಲೆನಾಡು ಗಿಡ್ಡ ಅಧ್ಯಯನ ಕೇಂದ್ರ ಮಲೆನಾಡಿನಲ್ಲೇ ಸ್ಥಾಪಿಸಬೇಕು ಎಂಬ ಹಕ್ಕೊತ್ತಾಯ ಮಾಡಲಾಯಿತು.